0205/2050/0624

**II Semester 3 Year LL.B/ VI Semester 5 Year B.A.LL.B. (Maj.-Min.)/ VI Semester 5 Year B.A.LL.B./B.B.A.LL.B. (Old/New) Examination, December 2018**

# FAMILY LAW – II : Mohd. Law and Indian Succession Law

Duration : 3 Hours

Max. Marks : 100

**Instructions :** 1. Answer Question No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written either in **English** or in **Kannada** completely.

Q. No. 1. Explain various schools and sub-schools of muslim law. Marks : 16

ಮುಸ್ಲಿಂ ಕಾನೂನಿನ ವಿವಿಧ ಪಂಥ ಹಾಗೂ ಒಳ ಪಂಥಗಳನ್ನು ವಿವರಿಸಿ.

Q. No. 2. Define "irregular marriage". When does a muslim marriage become irregular ? Explain the formalities to be completed for their regularisation. Marks : 16

"ಕ್ರಮಬದ್ಧವಲ್ಲದ ವಿವಾಹ" ವನ್ನು ಪರಿಭಾಷಿಸಿ. ಯಾವಾಗ ಮುಸ್ಲಿಂ ವಿವಾಹವು ಕ್ರಮಬದ್ಧವಲ್ಲದ ವಿವಾಹವಾಗುತ್ತದೆ ? ಇಂತಹ ವಿವಾಹವನ್ನು ಸಕ್ರಮಗೊಳಿಸಲು ಅನುಸರಿಸಬೇಕಾದ ಔಪಚಾರಿಕತೆಗಳನ್ನು ವಿವರಿಸಿ.

Q. No. 3. Write an essay on dissolution of marriage by " judicial process" under muslim law. Marks : 16

ಮುಸ್ಲಿಂ ಕಾನೂನಿನ ಅಡಿಯಲ್ಲಿ "ನ್ಯಾಯಿಕ ಪ್ರಕ್ರಿಯೆ" ಯ ಮೂಲಕ ವಿವಾಹ ವಿಚ್ಛೇದನದ ಬಗ್ಗೆ ಪ್ರಬಂಧವೊಂದನ್ನು ಬರೆಯಿರಿ.

Q. No. 4. Who are the legal guardians of a muslim minor for his property ? What are their powers and duties ? Marks : 16

ಒಬ್ಬ ಮುಸ್ಲಿಂ ಅಪ್ರಾಪ್ತವಯಸ್ಕನ ಸ್ವತ್ತುಗಳ ವಿಧಿಬದ್ಧ ಪಾಲಕರು ಯಾರು ? ಆ ಪಾಲಕರ ಅಧಿಕಾರ ಹಾಗೂ ಕರ್ತವ್ಯಗಳು ಯಾವುವು ?

P.T.O.

Scanned by CamScanner

Q. No. 5. What is pre-emption ? Who can claim it ? Explain the formalities to be observed for the assertion of the right of pre-emption. Marks : 16

ಪೂರ್ವ ಕ್ರಯಾಧಿಕಾರ ಎಂದರೇನು? ಯಾರು ಈ ಹಕ್ಕನ್ನು ಚಲಾಯಿಸಬಹುದು ? ಪೂರ್ವ ಕ್ರಯಾಧಿಕಾರವನ್ನು ಚಲಾಯಿಸುವಾಗ ಅನುಸರಿಸಬೇಕಾದ ಔಪಚಾರಿಕ ನಿಯಮಗಳನ್ನು ವಿವರಿಸಿ.

Q. No. 6. What is Domicile ? Explain the important provisions of Indian Succession Act relating to domicile. Marks : 16

ಅಧಿವಾಸ ಎಂದರೇನು ? ಅಧಿವಾಸದ ಬಗ್ಗೆ ಭಾರತೀಯ ಉತ್ತರಾಧಿಕಾರ ಕಾಯ್ದೆಯಲ್ಲಿರುವ ಪ್ರಮುಖ ಉಪಬಂಧಗಳನ್ನು ವಿವರಿಸಿ.

Q. No. 7. Who is an Administrator ? What are his powers and duties ? Marks : 16

ಆಡಳಿತಾಧಿಕಾರಿ ಎಂದರೆ ಯಾರು ? ಆತನ ಅಧಿಕಾರ ಹಾಗೂ ಕರ್ತವ್ಯಗಳನ್ನು ವಿವರಿಸಿ.

Q. No. 8. Write short notes on **any two** of the following : Marks : 8×2=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Doctrine of "Aul".

"ಅಲ್" ಸಿದ್ಧಾಂತ.

b) Nullity of marriage under Indian Divorce Act.

ಭಾರತೀಯ ವಿಚ್ಛೇದನ ಕಾಯ್ದೆಯಡಿಯಲ್ಲಿ ಶೂನ್ಯ ವಿವಾಹ.

c) Jurisdiction of family courts.

ಕೌಟುಂಬಿಕ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ.

Q. No. 9. Solve **any two** problems : Marks : 2×10=20

ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ :

a) John, a Christian dies leaving his wife, two sons, three daughters, father, mother and a sister. How do you distribute his property ? Decide.

ಜಾನ್ ಎಂಬ ಕ್ರೈಸ್ತ ಧರ್ಮೀಯನು ಹೆಂಡತಿ, ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣುಮಕ್ಕಳು, ತಂದೆ, ತಾಯಿ ಹಾಗೂ ಒಬ್ಬಳು ಸಹೋದರಿಯನ್ನು ಬಿಟ್ಟು ಮರಣಿಸಿದ್ದಾನೆ. ಆತನ ಆಸ್ತಿಯನ್ನು ಹೇಗೆ ಹಂಚುವಿರಿ ? ನಿರ್ಧರಿಸಿ.

Scanned by CamScanner

b) Fathima obtained the possession of the estate of her deceased husband to satisfy her claim for ₹ 50,000/- being the dower money due from her husband. Her two sons and two daughters insisted Fathima to give their respective shares in their father's property. But Fathima refused to meet their demands. Later, Fathima delivers that estate to her brother by way of gift. Explain the remedies available to the children of Fathima.

ಫಾತಿಮಾ ಎಂಬಾಕೆಯು ತನ್ನ ಗಂಡನ ಮರಣಾನಂತರ ಆತನ ಸ್ಥಿರಾಸ್ತಿಯನ್ನು ತನ್ನ ಕಬ್ಜೆ ತೆಗೆದುಕೊಂಡಿದ್ದು, ಆ ಮೂಲಕ ತನಗೆ ಮೃತ ಗಂಡನಿಂದ ಬರಬೇಕಾದ 50,000 ರೂ. ಗಳ ಕನ್ಯಾ ಶುಲ್ಕವನ್ನು ತೃಪ್ತಿಪಡಿಸಿಕೊಳ್ಳುವ ಉದ್ದೇಶ ಇಟ್ಟುಕೊಂಡಿದ್ದಾಳೆ. ಆಕೆಯ ಎರಡು ಗಂಡು ಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳು ಆ ಆಸ್ತಿಯಲ್ಲಿ ತಮಗೆ ಬರಬೇಕಾದ ಪಾಲನ್ನು ನೀಡುವಂತೆ ಬೇಡಿಕೆ ಇಟ್ಟಿದ್ದು, ಆ ಬೇಡಿಕೆಯನ್ನು ಫಾತಿಮಾ ತಿರಸ್ಕರಿಸಿದ್ದಾಳೆ. ನಂತರ ಫಾತಿಮಾಳು ಆ ಆಸ್ತಿಯನ್ನು ತನ್ನ ತಮ್ಮನಿಗೆ ದಾನರೂಪದಲ್ಲಿ ನೀಡುತ್ತಾಳೆ. ಫಾತಿಮಾಳ ಮಕ್ಕಳಿಗೆ ಲಭ್ಯವಿರುವ ಮಾರ್ಗೋಪಾಯಗಳನ್ನು ವಿವರಿಸಿ.

c) 'A' bequeathes ₹ 2 lakh to 'B' with a condition that 'B' shall get the bequest on his completing the age of 18 years and in case he should die before his 18th year the bequest shall go to 'C'. 'B' dies at his age of 25 years, but during the life time of 'A'. 'B' has been survived by 2 sons. Decide.

'ಎ' ಎಂಬಾತನು ತನ್ನ ಉಯಿಲಿನಲ್ಲಿ 'ಬಿ' ಗೆ 2 ಲಕ್ಷ ರೂಪಾಯಿ ಹಣ ನೀಡಲು ವ್ಯವಸ್ಥೆ ಮಾಡಿದ್ದು, ಈ ದೇಣಿಗೆಯನ್ನು 'ಬಿ' ಯು 18 ವರ್ಷ ವಯಸ್ಸನ್ನು ತಲುಪಿದ ನಂತರವಷ್ಟೇ ಪಡೆಯಬಹುದೆಂದೂ, ಒಂದು ವೇಳೆ 'ಬಿ' ಯು 18 ವರ್ಷ ಪ್ರಾಯಕ್ಕಿಂತ ಮುನ್ನವೇ ಮರಣಿಸಿದಲ್ಲಿ ಆ ಹಣವನ್ನು 'ಸಿ' ಯು ಪಡೆಯಬೇಕೆಂತಲೂ ನಿಬಂಧನೆಗಳನ್ನು ಹಾಕಿದ್ದಾನೆ. 'ಎ' ಯು ಬದುಕಿರುವಾಗಲೇ 'ಬಿ' ಯು ತನ್ನ 25ನೇ ವರ್ಷದಲ್ಲಿ ಇಬ್ಬರು ಪುತ್ರರನ್ನು ಬಿಟ್ಟು ಮರಣಿಸುತ್ತಾನೆ. ನಿರ್ಧರಿಸಿ.

Scanned by CamScanner